**ಸಾಕ್ಷಿಯನ್ನು ದಿಃ 09.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುರವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಎರಡು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ನಿಪಿ. 14 ಎಂದು, ಎರಡು ಐ.ಪಿ. ಬಿಲ್ ಗಳನ್ನು ಹಾಜರು ಪಡಿಸಿದ್ದು ಒಟ್ಟಾಗಿ ನಿಪಿ. 15 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನಗೆ 24 ವರ್ಷ ವಯಸ್ಸು. ಅಪಘಾತಕ್ಕೂ ಮೊದಲು ಟ್ರಾಕ್ಟರ್ ಚಾಲನೆ ಮಾಡುತ್ತಿದ್ದೆ ಮತ್ತು ವ್ಯವಸಾಯ ಮಾಡುತ್ತಿದ್ದೆ. ಸದರಿ ಟ್ರಾಕ್ಟರ್ ನನ್ನ ಅಣ್ಣನ ಹೆಸರಿನಲ್ಲಿದೆ. ಸದರಿ ಟ್ರಾಕ್ಟರ್ ನ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ದಿಃ 23.03.2023 ರಂದು ಅಪಘಾತ ಆಗಿರುತ್ತದೆ. ನಾನು ಆ ದಿನ ಹೋಗುತ್ತಿದ್ದ ಬೈಕ್ ಅಜೀತ್ ಎನ್ನುವವರು ಚಾಲನೆ ಮಾಡುತ್ತಿದ್ದರು. ಸದರಿ ಬೈಕ್ ಅಜೀತ್ ರವರಿಗೆ ಸೇರಿದ್ದು. ಅಪಘಾತ ಪಡಿಸಿತು ಎನ್ನಲಾದ ಟ್ರಾಕ್ಟರ್ ಯಾರದ್ದು ಎಂದು ನನಗೆ ಗೊತ್ತಿಲ್ಲ. ಚನ್ನಪಟ್ಟಣದವರದ್ದು ಎಂದು ನನ್ನ ತಂದೆ ಹೇಳಿರುತ್ತಾರೆ. ಅಪಘಾತವು ರಾತ್ರಿ ಸಮಯದಲ್ಲಿ ಆಗಿರುತ್ತದೆ. ಅಪಘಾತವು ಹುರ ಗ್ರಾಮದ ಬಳಿ ಆಗಿರುತ್ತದೆ. ಅಜೀತ್ ರವರ ಚಾಲನ ಪರವಾಗಿ ಹಾಜರು ಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಅರ್ಜೀತ್ ರವರ ಬಳಿ ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಅಜಿತ್ ರವರೇ ನಿರ್ಲಕ್ಷ್ಯತದಿಂದ ಮೋಟಾರ್ ಬೈಕ್ ಚಾಲನೆ ಮಾಡಿ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೋಟಾರ್ ಬೈಕ್ ಸಂಖ್ಯೆ ಗೊತ್ತಿಲ್ಲ.

ದೂರನ್ನು ಯಾರು ದಾಖಲಿಸಿರುತ್ತಾರೋ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು ಮೂರುವರೆ ತಿಂಗಳು ಕೋಮದಲ್ಲಿದ್ದೆ. ಒಂದೂವರೆ ವರ್ಷ ನನಗೆ ಪ್ರಜ್ಞೆ ಇಲ್ಲದೆ ಏನು ನೆನಪಿರಲಿಲ್ಲ ಎಂದು ತಡವರಿಸಿಕೂಂಡು ಉತ್ತರಿಸಿರುತ್ತಾರೆ. ಆ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ವಿಷಯವನ್ನು ನಾನೇ ಹೇಳಿ ವಕೀಲರಿಗೆ ಬರೆಯಿಸಿರುತ್ತೇನೆ. ಅಪಘಾತ ಆದ ತಕ್ಷಣ ಜೆ.ಎಸ್. ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಆನಂತರ ಕೆ.ವಿ.ಸಿ. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಜೆ.ಎಸ್.ಎಸ್ ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಆ ಬಗ್ಗೆ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು ಮೊದಲು ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ನನಗೆ ಸರಿಯಾಗಿ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ. 7 ರಲ್ಲಿ ಆರ್.ಟಿ.ಎ ಎಂದು ಮಾತ್ರ ನಮೂದಾಗಿದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಅಜೀತ್ ರವರು ಒಂದು ದಿನ ತಡವಾಗಿ ದೂರು ದಾಖಲಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಪ್ರ.ವ.ವರದಿಯನ್ನು ಅಪರಿಚಿತ ವಾಹನದ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ. 5 ರಲ್ಲಿ ನಮ್ಮ ಹೆಲ್ಮೆಟ್ ಗಳು ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ ಎಂದರೆ ನಾವು ಹೆಲ್ಮೆಟ್ ಹಾಕಿದ್ದೇವು ಎಂದು ಉತ್ತರಿಸಿರುತ್ತಾರೆ. ಕೆ.ವಿ.ಸಿ. ಆಸ್ಪತ್ರೆಯಲ್ಲಿ ಯಾವ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ ಎಂದರೆ ನೆನಪಾಗುತ್ತಿಲ್ಲ. ಆರೋಪಿ ಶ್ರೀಕಂಠ ಯಾರು ಎಂದು ನನಗೆ ಗೊತ್ತಿಲ್ಲ. ಔಷಧಿ ಪಾವತಿ ರಶೀದಿಗಳನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಹಣ ಕಟ್ಟದೇ ಇರುವ ಕಾರಣ ಇನ್ನೂ ಕೆಲವು ರಶೀದಿಗಳನ್ನು ಆಸ್ಪತ್ರೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಡಾ. ನಂದೀಶ್ ಕುಮಾರ್ ಮತ್ತು ಡಾ. ಅನಿಲ್ ಸಾಂಗ್ಲಿ ಇವರು ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ನಿಪಿ. 14 ರಲ್ಲಿ ವಾಹನ ಸಂಖ್ಯೆಗಳು ನಮೂದಾಗಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ನಿಪಿ. 14 ರಲ್ಲಿ ನನಗೆ ಪ್ರಜ್ಞೆ ಇತ್ತು ಆರಾಮವಾಗಿದ್ದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಪ್ರ.ವ.ವರದಿ, ಗಾಯದ ಪ್ರಮಾಣ ಪತ್ರ ಮತ್ತು ಡಿಸ್ ಚಾರ್ಜ್ ಸಮ್ಮರಿಯಲ್ಲಿ ವಾಹನದ ಸಂಖ್ಯೆ ನಮೂದಾಗದೇ ಇರುವ ಕಾರಣ ನಾವು ಪೋಲೀಸರ ಜೊತೆ ಶಾಮಿಲಾಗಿ ಈ ಪ್ರಕರಣದಲ್ಲಿ ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಅಜಿತ್ ಇಬ್ಬರು ಮಧ್ಯಪಾನ ಮಾಡಿಕೊಂಡು ಹೋಗಿ ಬಿದ್ದಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 34 ವರ್ಷ ವಯಸ್ಸು ಎಂದರೆ ಸರಿಯಲ್ಲ. ನಾನು ಮೊದಲಿನ ಹಾಗೆಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ಬಲಗೈ

ಸ್ವಾಧೀನ ಇಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತವು ಅಜಿತ್ ರವರ ತಪ್ಪಿನಿಂದ ಆದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.